**ಸಾಕ್ಷಿಯನ್ನು ದಿನಾಂಕಃ 19-02-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ನಂ. 9 ಪರ ವಕೀಲರವರಿಂದಃ**

1. ನಾನು ಅರಸಿಕೆರೆ ಪುಟ್ಟವ್ವಳನ್ನು ನೋಡಿದ್ದೇನೆ. ಆಕೆಯ ಗಂಡ ದುಗ್ಗಪ್ಪನನ್ನು ನಾನು ನೋಡಿರುವುದಿಲ್ಲ. ಪುಟ್ಟಮ್ಮಳಿಗೆ ಇಬ್ಬರು ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು. 2 ರಿಂದ 4 ನೇ ಪ್ರತಿವಾದಿಗಳು ದುರುಗಪ್ಪನ ಮಕ್ಕಳು ಅಂದರೆ ಸರಿ. 1 ರಿಂದ 3 ನೇ ವಾದಿಯರು ನನ್ನ ಅಣ್ಣ ತಮ್ಮಂದಿರು. 1 ರಿಂದ 3 ನೇ ವಾದಿಯರ ತಂದೆ ಹಾಗೂ 1 ನೇ ಪ್ರತಿವಾದಿಯ ಗಂಡ ಅಣ್ಣ ತಮ್ಮಂದಿರು. ನನ್ನ ಅಜ್ಜನ ಹೆಸರು ಕೆಂಚಪ್ಪ. ಹಾಲಪ್ಪ ಮತ್ತು ಮೈಲಮ್ಮ ದುರುಗಪ್ಪನ ಮಕ್ಕಳು. ಹಾಲಪ್ಪ ಪುಟ್ಟಮ್ಮಳಿಗೆ ಮಾವನಾಗಬೇಕು ಮತ್ತು ಮೈಲಪ್ಪ ಪುಟ್ಟಮ್ಮಳಿಗೆ ಮೈದುನ ಆಗಬೇಕು. ಪುಟ್ಟಮ್ಮಳ ಫೊಟೋವನ್ನು ನೋಡಿದರೆ ಗುರುತಿಸುತ್ತೇನೆ.

2. ಸಾಕ್ಷಿಗೆ ವಕೀಲರು 3 ಫೊಟೋಗಳನ್ನು ತೋರಿಸಿದ್ದು ಈಕೆ ಪುಟ್ಟಮ್ಮ ಹೌದೋ ಅಲ್ಲವೊ ಎಂದು ಕೇಳಿದಾಗ ಸಾಕ್ಷಿಯು ಹೌದು ಎಂದು ನುಡಿದಿರುವರು ಮತ್ತು ಅದರಲ್ಲಿ ಕಂಡು ಬರುವ ಅಸ್ತಿ ದಾವಾ ಅಸ್ತಿ ಆಗಿರುತ್ತದೆ ಎಂದು ನುಡಿದಿರುವರು. ಆದ್ದರಿಂದ ಸದರಿ 3 ಫೊಟೋಗಳನ್ನು ನ್ಯಾಯಾಲಯದ ಮುಂದಿನ ರೆಫರೆನ್ಸಗಾಗಿ ***ನಿಸಿ 1 ರಿಂದ 3*** ಎಂದು ಗುರುತಿಸಲಾಯಿತು.

3. ನಾವು ಈ ಹಿಂದೆ ಕಡತಿ ಗ್ರಾಮದಲ್ಲಿ ವಾಸ ಇದ್ದು ದಾವೆ ಹಾಕುವ ಕಾಲಕ್ಕೆ ದಾವಣೆಗೆರಯ ಯರಗುಂಟೆ ಗ್ರಾಮದಲ್ಲಿ ವಾಸ ಮಾಡುತ್ತಿದ್ದೇವೆ ಎಂದು

ನಾನು ಹೇಳಿರುತ್ತೇನೆ ಅಂದರೆ ಸರಿ. ಪುಟ್ಟವ್ವ ಯಾವಾಗ ಮೃತ ಪಟ್ಟರು ಎಂದು ನನಗೆ ಗೊತ್ತಿಲ್ಲ. ನಾವು ಕಡತಿ ಗ್ರಾಮದಲ್ಲಿ ವಾಸವಿದ್ದೆವು ಎಂದು ತೋರಿಸಲು ಚುನಾವಣೆ ಗುರುತಿನ ಚೀಟಿ ಹಾಗೂ ಅಧಾರ ಕಾರ್ಡನ್ನು ಹಾಜರು ಪಡಿಸಿರುವುದಿಲ್ಲ. ಅದೇ ರೀತಿ ನಾವು ಯರಗುಂಟಿ ಗ್ರಾಮದಲ್ಲಿ ವಾಸ ಮಾಡಿದ್ದೇವೆ ಎಂದು ತೋರಿಸಲು ಸದರಿ ದಾಖಲೆಗಳನ್ನು ತೋರಿಸಿರುವುದಿಲ್ಲ. ಆ ಬಗ್ಗೆ ದಾಖಲೆಗಳನ್ನು ಸಲ್ಲಿಸಲು ತೊಂದರೆ ಇರುತ್ತದೆ.

4. ತನ್ನ ಗಂಡ ತೀರಿಕೊಂಡ ನಂತರ ಮನೆತನವನ್ನು ಪುಟ್ಟವ್ವಳೇ ನಡೆಸಿಕೊಂಡು ಹೋಗುತ್ತಿದ್ದರು ಅಂದರೆ ಸರಿಯಲ್ಲ. ದುರುಗಪ್ಪ ತೀರಿಕೊಂಡ ನಂತರ ದಾವಾ ಅಸ್ತಿಯ ದಾಖಲಗಳು ಪಟ್ಟವ್ವನ ಹೆಸರಿಗೆ ವರ್ಗಾವಣೆ ಆದವು ಅಂದರೆ ನನಗೆ ಗೊತ್ತಿಲ್ಲ. ಪುಟ್ಟವ್ವನ ಹೆಸರಿಗೆ ವರ್ಗಾವಣೆ ಆಗಿರುವ ದಾಖಲೆಗಳನ್ನು ನಿಪಿ 32 ರಿಂದ 39 ರಂತೆ ನಾನು ಸಲ್ಲಿಸಿದ್ದೇನೆ ಅಂದರೆ ಸರಿ. ದಿನಾಂಕ 16.11.2007 ರ ನೊಂದಾಯಿತ ಅಡಮಾನ ಪತ್ರವದಲ್ಲಿ ಇರುವ ಸ್ಕ್ಯಾನ್ ಪೊಟೋದಲ್ಲಿ ಇರುವ ವ್ಯಕ್ತಿ ಪುಟ್ಟವ್ವಳು ಹೌದೋ ಅಥಾವಾ ಇಲ್ಲವೋ ಎಂಬ ಪ್ರಶ್ನೆಗೆ ಸಾಕ್ಷಿ ಸರಿಯಾಗಿ ಕಾಣಿಸಿಸುವುದಿಲ್ಲ ಎಂದು ನುಡಿದರು. ಪುಟ್ಟವ್ವಳು ಮನೆತನ ಅವಶ್ಯಕತೆಗಾಗಿ ಮತ್ತು ದಾವಾ ಅಸ್ತಿಯ ಸುದಾರಣೆಗಾಗಿ ದಾವಾ ಅಸ್ತಿಗಳನ್ನು ಬ್ಯಾಂಕಿಗೆ ಅಡಮಾನ ಮಾಡಿ ಸಾಲ ಪಡೆದಿರುವರು ಅಂದರೆ ನನಗೆ ಗೊತ್ತಿಲ್ಲ.

5. ಪುಟ್ಟವ್ವಳು ಬ್ಯಾಂಕಿಗೆ ಅಡಮಾನ ವಿಚಾರ ನಮಗೆಲ್ಲರಿಗೂ ಗೊತ್ತಿದ್ದರೂ ಕೂಡ ಸಾಲವನ್ನು ಕಟ್ಟಬೇಕಾಗುತ್ತದೆ ಎಂಬ ಜವಾಬ್ದಾರಿಯಿುಂದ ತಪ್ಪಿಸಿಕೊಳ್ಳಲು ಎಲ್ಲಾ ವಿಚಾರಗಳಿಂದ ಅಲ್ಲಗಳೆಯುತ್ತಿದ್ದೇನೆ ಅಂದರೆ ಸರಿಯಲ್ಲ. ಆನೇಕ ಬಾರಿ ಸಾಲ

ಮರುಪಾವತಿಸುವಂತೆ 9 ನೇ ಪ್ರತಿವಾದಿ ನನ್ನನ್ನು ಮತ್ತು 1 ರಿಂದ 4 ನೇ ಪ್ರ 2 ವಾದಿಗಳನ್ನು ಕೇಳಿರುವರು ಅಂದರೆ ಸರಿಯಲ್ಲ. ಸಾರ್ವಜನಿಕರ ಹಣವನ್ನು ಲಪಟಾಯಿಸಲು ನಾನು ಮತು 1 ರಿಂದ 4 ನೇ ಪ್ರತಿವಾದಿಗಳು ಮಿಲಾಪಿಯಾಗಿ ಈ ಸುಳ್ಳು ದಾವೆಯಲ್ಲಿ ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ. ನಾನು ಮತ್ತು 1 ರಿಂದ 4 ನೇ ಪ್ರತಿವಾದಿಗಳು ಸಾಲವನ್ನು ಕಟ್ಟಲು ಬಾಧ್ಯಸ್ತರಿದ್ದೇವೆ ಅಂದರೆ ಸರಿಯಲ್ಲ. ಈ ದಾವೆ ಕಾಲಮಿತಿಯೋಳಗೆ ಇಲ್ಲ ಅಂದರೆ ನನಗೆ ಗೊತ್ತಿಲ್ಲ.

6. ಬ್ಯಾಂಕಿನ ಹಣವನ್ನು ಎತ್ತಿಹಾಕಲು 9 ನೇ ಪ್ರ 2 ವಾದಿಯನ್ನು ಅನಾವಶ್ಯಕವಾಗಿ ಈ ದಾವೆಯಲ್ಲಿ ಸೇರಿಸಿದ್ದೇವೆ ಅಂದರೆ ಸರಿಯಲ್ಲ. ಬ್ಯಾಂಕಿನ ಸಾಲವನ್ನು ಪಾವತಿ ಮಾಡಲು ನಾವುಹೊಣೆಗಾರರು ಇದ್ದೇವೆ ಅಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

19-02-2026

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 19.02.2026